2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ102/2016

| | | | |
|---|---|---|---|
| ಸಾಕ್ಷಿದಾರರ ಹೆಸರು | - ಕುಮಾರ | | ಪಿಡಬ್ಲೂ - 2 |
| ತಂದೆಯ ಹೆಸರು | - ಅಯ್ಯಪ್ಪ ಸ್ವಾಮಿ | | ಸಿಡಬ್ಲೂ - 2 |
| ವಯಸ್ಸು | - 35 ವರ್ಷ | | |
| ಉದ್ಯೋಗ | - ಕೂಲಿ | | |
| ವಾಸ ಸ್ಥಳ | - ಮಲ್ಲೇನಹಳ್ಳಿ | | |

ದಿನಾಂಕಃ 26-07-2018 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ನನಗೆ ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯವಿಲ್ಲ. ನಾನು ಆರೋಪಿತರನ್ನು ಮತ್ತು ಫಿರ್ಯಾದುದಾರ ವನಜಾಕ್ಷಿಯವರನ್ನು ಈ ಮೊದಲು ನೋಡಿಲ್ಲ. ನನಗೆ ಯಶೋಧರವರು ಸಹ ಗೊತ್ತಿಲ್ಲ. ಈಗ ನೋಡುತ್ತಿರುವ ದಾಖಲೆಯ ಮೇಲೆ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ.8 ಎಂದು ಮತ್ತು ಅದರ ಮೇಲೆ ಸಾಕ್ಷಿ ಗುರುತು ಹಿಡಿದ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಯಿತು. ನಾನು ಸುಮಾರು 3 ರಿಂದ 4 ವರ್ಷಗಳ ಹಿಂದೆ ಚಿಕ್ಕಮಗಳೂರಿನ ಗ್ರಾಮಾಂತರ ಪೊಲೀಸ್ ಠಾಣೆಗೆ ಹೋಗಿದ್ದೆ. ಆ ಸಮಯದಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ನಾನು ಸದರಿ ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಮಾಡಿದ್ದೇನೆ.
2. ಪೊಲೀಸರು ನನ್ನನ್ನು ತಿಲಕ್ ಪಾರ್ಕ್ ರಸ್ತೆಯ ಹತ್ತಿರ ಇರುವ ರುದ್ರಪ್ಪನವರ ಮನೆಗೆ ಕರೆದುಕೊಂಡು ಹೋಗಿಲ್ಲ ಮತ್ತು ಅಲ್ಲಿ ಯಶೋಧ ರವರು ತೋರಿಸಿದ ಸ್ಥಳದಲ್ಲಿ ಯಾವುದೇ ಸ್ಥಳ ಮಹಜರ್

ಮಾಡಿಲ್ಲ ಮತ್ತು ಅಲ್ಲಿ ನಾನು ನಿಪಿ.8 ಕ್ಕೆ ಸಹಿ ಮಾಡಿಲ್ಲ. ಈಗ ನೋಡುತ್ತಿರುವ ಫೋಟೋದಲ್ಲಿ ನನ್ನ ಇರುವಿಕೆ ಕಂಡು ಬರುತ್ತದೆ. ಸದರಿ ಫೋಟೋವನ್ನು ನಿಪಿ.9 ಎಂದು ಗುರುತಿಸಲಾಯಿತು. ಸದರಿ ಫೋಟೋವನ್ನು ಪೊಲೀಸರು ಠಾಣೆಯ ಹತ್ತಿರ ತೆಗೆದಿದ್ದಾರೆ. ನನಗೆ ನಿಪಿ.8 ರಲ್ಲಿ ಬರೆದ ವಿಷಯಗಳು ಗೊತ್ತಿಲ್ಲ. ನಿಪಿ.9 ಫೋಟೋವನ್ನು ರುದ್ರಪ್ಪನವರಿಗೆ ಸೇರಿದ ಆರೋಪಿತರು ಬಾಡಿಗೆಗೆ ವಾಸವಿದ್ದ ಮನೆಯಲ್ಲಿ ತೆಗೆದಿಲ್ಲ.

(ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲು ಮಾನ್ಯ ಅಭಿಯೋಜಕರಿಂದ:-

3. ದಿನಾಂಕ:29-02-2016 ರಂದು ಬಸವನಹಳ್ಳಿ ಪೊಲೀಸ್ ಠಾಣೆಯ ಪೊಲೀಸರು ತಿಲಕ್ ಪಾರ್ಕ್ ರಸ್ತೆಯ ಪೂರ್ವ ಬದಿಯಲ್ಲಿರುವ ರುದ್ರಪ್ಪನವರ ಬಾಬ್ತು ಮನೆಯ ಹಿಂಬದಿಯಲ್ಲಿ ಆರೋಪಿತರು ವಾಸವಾಗಿದ್ದ ಮನೆಯಲ್ಲಿ ಮಧ್ಯಾಹ್ನ 3 ರಿಂದ 4 ಗಂಟೆಯವರೆಗೆ ಕೃತ್ಯಕ್ಕೆ ಸಂಬಂಧಿಸಿದಂತೆ ಯಶೋಧರವರು ತೋರಿಸಿದ ಜಾಗದಲ್ಲಿ ಸ್ಥಳವನ್ನು ಅಜಮಾಯಿಸಿ ನಿಪಿ.8 ರಂತೆ ಸ್ಥಳ ಮಹಜರ್ ನ್ನು ಜರುಗಿಸಿದ್ದಾರೆ ಎನ್ನುವುದು ಸುಳ್ಳು. ಸದರಿ ಮಹಜರ್ ಕಾಲದಲ್ಲಿ ಪೊಲೀಸರು ನಿಪಿ.9 ಫೋಟೋವನ್ನು ಆ ಸ್ಥಳದಲ್ಲೇ ತೆಗೆದಿದ್ದಾರೆ ಎನ್ನುವುದು ಸುಳ್ಳು. ನಿಪಿ.8 ಮಹಜರ್ ನ್ನು ಓದಿ ಹೇಳಿದ ಮೇರೆಗೆ ನಾನು ಅದರಲ್ಲಿ ಬರೆದ ವಿಷಯಗಳನ್ನು ಒಪ್ಪಿಕೊಂಡು ನಿಪಿ.8(ಎ) ನಲ್ಲಿ ನನ್ನ ಸಹಿಯನ್ನು

ಮಾಡಿದ್ದೇನೆ ಎನ್ನುವುದು ಸುಳ್ಳು . ನನಗೆ ನಿಪಿ.8 ಮತ್ತು 9 ರ ವಿಷಯಗಳು ಸಂಪೂರ್ಣವಾಗಿ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

ಪಾಟೀ ಸವಾಲು ಶ್ರೀ ವಕೀಲರಿಂದ – ಆರೋಪಿತನ ಪರವಾಗಿ

4. ಇಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸ.ಇ.ಎ.ಒ.

(ಕೆ.ಎಲ್. ಅಶೋಕ್)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಿಸಿಕೆ